# ಮಣ್ಣು ರಹಿತ ಕೃಷಿ ಅಥವಾ ಹೈಡ್ರೋಪೋನಿಕ್ಸ್ ಕೃಷಿ

ಸಾಮಾನ್ಯವಾಗಿ ಕೃಷಿ ಎಂದರೇ ಮಣ್ಣು ಭೂಮಿಯಲ್ಲೇ ನಡೆಸುವ ಉದ್ಯೋಗ, ಹಣ್ಣು ತರಕಾರಿ, ಆಹಾರ ಬೆಳೆಯುವ ಬೇಸಾಯ. ಮಣ್ಣೇ ಇಲ್ಲದ ಕೃಷಿ ಎಂದರೇ ನಮ್ಮ ರೈತರು ಆಚ್ಚರಿ ಪಡಬೇಕಿಲ್ಲಾ. ಅಮೇರಿಕಾ ಹಾಗೂ ಆಸ್ಟ್ರೇಲಿಯಾ ದೇಶಗಳಲ್ಲಿ ಕಳೆದ 60 ವರ್ಷಗಳಿಂದ ಹವ್ಯಾಸ ಹಾಗೂ ವಾಣಿಜ್ಯ ಕೃಷಿಯನ್ನು ನಡೆಸುತ್ತಾ ಬಂದಿದೆ. ಎಂದು ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಪ್ರಕಾಶ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಫೆಟ್‌ಬಹೋರ ಫೌಂಡೇಶನ ಅಧ್ಯಕ್ಷರಾದ ಕ್ಯಾ.ಸಿ.ವಿ. ಪ್ರಕಾಶ ಮೊಟ್ಟ ಮೊದಲ ಬಾರಿಗೆ ಭಾರತೀಯರಿಗೆ ಮಣ್ಣು ರಹಿತ ಕೃಷಿಯನ್ನು ಪರಿಚಯಿಸಲು ತರಬೇತಿ ಶಿಬಿರವನ್ನು ಬೆಂಗಳೂರಿನಲ್ಲಿ ಕೈಗೊಂಡದಾರೇ.

ನಗರ ಪ್ರದೇಶದ ಜನರು ಇದನ್ನು ಹವ್ಯಾಸವನ್ನಾಗಿ ಕೈಗೊಂಡು, ತಮ್ಮ ಮನೆಗಳದ ತಾರಸಿ ಅಥವಾ ಕಾಂಪೊಂಡಿನಲ್ಲಿ ಕುಟುಂಬಕ್ಕೆ ಬೇಕಾದ ಹಣ್ಣು , ತರಕಾರಿಗಳನ್ನು ಬಿಡುವಿನ ವೇಳೆಯಲ್ಲಿ ಕೈಗೊಳ್ಳಬಹುದಾಗಿದೆ.

ಈ ಮಣ್ಣು ರಹಿತ ಕೃಷಿ ಪದ್ಧತಿಯಲ್ಲಿ ತ್ಯಾಜ್ಯ ವಸ್ತುಗಳಾದ ತೆಂಗಿನ ನಾರು, ತೆಂಗಿನ ಚಿಪ್ಪಿನ ಹುಡಿಯನ್ನು ಮಿಶ್ರಣ ಮಾಡಿ ಮಾಡಿದ ಕೋಕೋ ಪೀಟನ್ನು ಕಚ್ಚಾ ಮೂಲ ಸಾಮಗ್ರಿಯನ್ನಾಗಿ ಬಳಸಲಾಗುತ್ತದೆ. ಇದಕ್ಕೆ ಪೋಷಕಾಂಶಗಳನ್ನು ಬೆರಸಿ. ಬಳಸಬೇಕು. ಸಣ್ಣ ಸಣ್ಣ ಪ್ಲಾಸ್ಟಿಕ್ ಟ್ರೇ, ಮೊಟ್ಟೆ ಇಡುವ ಪ್ಲಾಸ್ಟಿಕ್ ಮೊಟ್ಟೆ ಪಟ್ಟಿಗಳನ್ನು ಬಳಸಬಸುದು. ಇದಲ್ಲದೇ ಜಾಕಾಯಿ ಪೆಟ್ಟಿಗೆಗಳನ್ನು ಬಳಸಿಕೊಳ್ಳಬಹುದು. ಪ್ಲಾಸ್ಟಿಕ್ ತೋಟ, ಬಾಕ್ಸಗಳನ್ನು ಸಹ ಬಳಸಿಕೊಳ್ಳಬಹುದು. ಮೊದಲಿಗೆ 2-3 ಅಡಿ ಉದ್ದದ ಪ್ಲಾಸ್ಟಿಕ್ ಟ್ರೇ ಹೊರಗಿನಿಂದ ನಲ್ಲಿಯಂತಹ ಉಪಕರಣವನ್ನು ಅಳವಡಿಸಿಕೊಳ್ಳಬೇಕು. ಏಕೆಂದರೇ ಸಸಿಗಳಿಗೆ ಹಾಕಿದ ನೀರು ಟ್ರೇನಲ್ಲಿ ಉಳಿದು. ಕೋಕೋಪೀಟ್ ಕೊಳೆಯದಂತೆ ಹೆಚ್ಚುವರಿ ನೀರು ನಿಲ್ಲಿಯ ಮೂಲಕ ಹೊರಕ್ಕೆ ತೆಗೆಯಲು ಅನುಕೂಲವಾಗುತ್ತದೆ. ಮೊದಲಿಗೆ ಕೊಕೋಪಿಟ್‌ನ್ನು ಅಂದರೇ ತೆಂಗಿನ ಜಂಗಿಗೆ ನೀರು ಹಸಿಸಬೇಕು. ಕೋಕೋ ಪೀಟ್ ತುಂಭಾ ಒದ್ದೆಯಾಗಿರಬಾರದು ಹಾಗೆಯೇ ತುಂಭಾ ಒಣಗಿಯು ಇರಬಾರದು. ಟ್ರೇ ತುಂಬಾ ಹರಡಿಕೊಂಡ, ಬೆರಳಿನಿಂದ ಅಥವಾ ಒಂದು ಸಣ್ಣ ಕೋಲಿನಿಂದ ಒಂದು ಇಂಚು ಅಂತರದ ಸಾಲುಗಳನ್ನು ಮಾಡಿಕೊಂಡು ಅರ್ಧ ಇಂಚಿನ ಅಂತರದಲ್ಲಿ ನಮಗೇ ಬೇಕಾದ ತರಕಾರಿ ಬೀಜಗಳನ್ನು ½ ಅಥವಾ 1 ಇಂಚು ಅಂತರದಲ್ಲಿ ಒಂದೊಂದೆ ಬೀಜವನ್ನು ಹಾಕಿ, ನಂತರ ಹಗುರವಾಗಿ ಕೋಕೋ ಪೀಟನಿಂದ ಮುಚ್ಚಬೇಕು. ಒಂದೇ ತರದ ಸಸಿ ಮಡಿ ಮಾಡದೇ ಹಲವು ಬಗೆಯ ತರಕಾರಿ ಸಸಿ ಮಡಿಯನ್ನೇ ಒಂದೇ ಟ್ರೇನಲ್ಲಿ ಮಾಡಿಕೊಳ್ಳಬಹುದು. ಹೇಗೆಂದರೇ ಮೊದಲ ಸಾಲಿನಲ್ಲಿ ಟೊಮಾಟ ಬೀಜ ಹಾಕಿದರೆ, 2ನೇ ಸಾಲಿನಲ್ಲಿ ಮೆಣಸಿನ ಕಾಯಿ, 3ನೇ ಸಾಲಿನಲ್ಲಿ ಎಲೆಕೋಸು ಬೀಜ ಹಾಕಬಹುದು, 4ನೇ ಸಾಲಿಗೆ ಬೆಳ್ಳುಳ್ಳಿ . ಈರುಳ್ಳಿಯನ್ನು ಸಹ ನೆಡಬಹುದು. ಈ ರೀತಿಯಾಗಿ ಮಿಶ್ರಬೆಳೆ ತರಕಾರಿ ಸಸಿ



ಮಾಡಿಕೊಂಡರೇ ವಿವಿಧ ಗಿಡಗಳಿಗೆ ತಗಲುವ ಹುಳಗಳು, ಕೀಟಗಳನ್ನು ನಿಯಂತ್ರಿಸಬಹುದು. ನಮಗೆ ಎಷ್ಟು ಸಸಿಗಳನ್ನು ಬೇಕು ಎಂಬುದನ್ನು ಅರಿತುಕೊಂಡು 3-4 ಟ್ರೇನಲ್ಲಿ ಸಸಿ ಮಡಿ ಮಾಡಿಕೊಳ್ಳುವುದು. ಒಳ್ಳೆಯದು. ಎಲ್ಲಾ ಬೀಜಗಳನ್ನು ಹಾಕಿ, ಸಾಲುಗಳನ್ನು ಮುಚ್ಚಿದ ನಂತರ ಒಂದು ಲೋಟದಲ್ಲಿ ನೀರನ್ನು ತೆಗೆದುಕೊಂಡು ಲೋಟದ ಮೇಲ್ಭಾಗವನ್ನು ಹಸ್ತದಿಂದ ಮುಚ್ಚಿ ನಿಧಾನವಾಗಿ ನೀರನ್ನು ಈ ಕೋಕೋ ಪೀಟ್‌ನ ಮೇಲೆ ನೀರನ್ನು ಹಾಕಬೇಕು. ಒಂದು ಟ್ರೇಗೆ 2 ಲೋಟ ನೀರು ಸಾಕಾಗುತ್ತದೆ. ಪ್ರತಿ ನಿತ್ಯ ಈ ಸಸಿ ಮಡಿಗಳನ್ನು ಗಮನೀಸುತ್ತಾ ಇರಬೇಕು. ಈ ಟ್ರೇಗಳಿಗೆ ಯಾವುದಾದರೂ ಕ್ರಿಮಿ ಕೀಟಗಳ ಹಾವಳಿ, ಇರುವೆಗಳು ಸೇರಿವೆ ಬತ್ತಿದ ಬಂದು ವಾರದೊಳಗೆ ಮೊಳಕೆಯೊಡೆಯುತ್ತವೆ. ಗಿಡಗಳು 1&1 ½ ಅಡಿ ಬೆಳೆದಾಗ, ಈ ಮಡಿಯಿಂದ ಕಿತ್ತು ದೊಡ್ಡ ಟ್ರೇಗಳಿಗೆ ವರ್ಗಾಯಿಸಬೇಕು. ಎಲ್ಲಾ ಸಸಿಗಳು ಕೊಟ್ಟಿಗೆ ಮೊಳಕೆ ಬರದಂತ ಮಿಶ್ರ ತರಕಾರಿ ಬೀಜಗಳನ್ನು ಕೃಷಿಗೆ ಆಯ್ಕೆ ಮಾಡುವುದು ಉತ್ತಮ. ದೊಡ್ಡ ದೊಡ್ಡ ಪ್ಲಾಸ್ಟಿಕ್ ಟ್ರೇ ಅಥವಾ ಜಾಯಿಕಾಯಿ ಪೆಟ್ಟಿಗೆ 3 ಅಡಿ ಎತ್ತರ 6-8 ಅಡಿ ಉದ್ದದ ಪೆಟ್ಟಿಗೆಯನ್ನು ಆರಿಸಿಕೊಂಡು ಕೋಕೋ ಪೀಟನ್ನು ಸಮನಾಗಿ ಹರಡಿಕೊಂಡು ಇದರ ಜೊತೆ ಅಜೊಲ್ಲಾ ಗೊಬ್ಬರವನ್ನು ಹರಡಿ ಗಿಡಗಳನ್ನು ನೆಡಲು ಹರಿಕೊಳ್ಳಬೇಕು. ಸಸಿಗಳನ್ನು ಪ್ರತಿನಿತ್ಯ ಬೆಳಿಗ್ಗೆ ಸಾಯಂಕಾಲ ಗಮನಿಸಿ ಯಾವುದೇ ಸಸಿಗೆ ರೋಗ ತಗಲಿದ್ದರೇ ಅದನ್ನು ಕಿತ್ತುಹಾಕಿ, ಆರೋಗ್ಯವಂತ ಸಸಿಗಳನ್ನು ಒಂದೊಂದಾಗಿ ಬೇರೆ ಸಮೇತ ಸಸಿ ಮಡಿಯಿಂದ ಕಿತ್ತು.

ದೊಡ್ಡ ಟ್ರೇನಲ್ಲಿ ಗಿಡಗಳನ್ನು ನೋಡಿಕೊಂಡು 1 ರಿಂದ 2 ಅಡಿ ಅಂತರದಲ್ಲಿ ನೆಡಬೇಕು. ಟೊಮೊಟಾ, ಹಾಗಲ, ಗಳಿಗೆ ಬೆಂಬಲವಾಗಿ ನಿಲ್ಲುವಂತೆ ಬಿದುರು ತುಂಡುಗಳನ್ನು ನೆಟ್ಟು ಈ ಕಡ್ಡಿಗಳು ಗಿಡಗಳಿಗೆ ಬೆಂಬಲ ನೀಡುವಂತೆ ಮಾಡಬೇಕು. ಗಿಡ ನೆಟ್ಟ ನಂತರ ಬಿಸಿಲನ್ನು ನೋಡಿಕೊಂಡು ಬೆಳಿಗ್ಗೆ ಸಾಯಂಕಾಲ ನೀರನ್ನು ಹಾಯಿಸಬೇಕು. ಗಿಡವು 3-4 ಅಡಿ ಬೆಳೆದಾಗ ಅವುಗಳಿಗೆ ಅಗತ್ಯವಾದ ಪೋಷಕಾಂಶ, ಗೊಬ್ಬರವನ್ನು ದ್ರಾವಣ ರೂಪದಲ್ಲಿ ನಿಗಧಿತ ಬೆಳಿಗೆ ನಿಗಧಿತ ಗೊಬ್ಬರವಾದ, ಸಾರಜನಕ, ರಂಜಕ, ಗಂಧಕ, ಕಬ್ಬಿಣಗಳನ್ನು ನೀಡಬೇಕು. ಗಿಡಗಳು ಹೂ ಬಿಡುವಾಗ ಕೀಟನಾಶಕ ಸಿಂಪಡಿಸಬೇಕು. ಹೂ ಕಾಯಾಗಿ, ಹಣ್ಣು ಹಂತದಲ್ಲಿ ಪೋಟಾಸಿಯಂ, ನಂತಹ ಮೈಕ್ರೋ ಪೋಷಕಾಂಶಗಳನ್ನು ನೀಡಬೇಕು. ಹೆಚ್ಚು ಬಿಸಿಲು ತಪ್ಪಿಸಲು ಈ ಸಸಿಗಳನ್ನು ಇಷ್ಟ ಜಾಗದಲ್ಲಿ ಕಪ್ಪು ಬಣ್ಣದ ಶೆಡ್‌ನೆಟ್‌ನಿಂದ ಚಪ್ಪರವನ್ನಾಗಿ ಮಾಡಿ ಬಿಸಿಲು ಹೆಚ್ಚು ಬೀಳದಂತೆ ನೆರಳನ್ನು ನೀಡಿದರೇ ಗಿಡಗಳು ಬಾಡುವುದು, ತಪ್ಪಿಸಬಹುದಾಗಿದೆ. 30-45 ದಿನಗಳಲ್ಲಿ ಕೊಯ್ಲಿಗೆ ಬರುವಂತಹ ತರಕಾರಿ ಬೆಳೆ ಆಯ್ಕೆಯಾದಲ್ಲಿ, ಒಂದು ತರಹದ ತರಕಾರಿಯನ್ನು ಕಿತ್ತುಕೊಳ್ಳಬಹುದು. ನಂತರ ಪೂರ್ಣವಾಗಿ ಫಲವನ್ನು ಕೊಯ್ಲು ಮಾಡಿದ ನಂತರ ಒಣಗಿದ ಆ ಸಸಿಗಳನ್ನು ಕಿತ್ತು ಹಾಕಿದರೆ, ಉಳಿದ ಬೆಳೆಗೆ ಹೆಚ್ಚು ಜಾಗ ದೊರೆಯುತ್ತದೆ ಇದನ್ನು ಗೃಹಿಣಿಯರು ಹವ್ಯಾಸವಾಗಿ ಕೈಗೊಂಡದರೇ ಅವರ ಬಿಡುವಿನ ಸಮಯ ಸದುಪಯೋಗವಾಗುವುದಲ್ಲದೆ ತಾಜಾ ತರಕಾರಿಯನ್ನು ತಮ್ಮ ಮನೆಯಂಗಳದಲ್ಲೇ ಬೆಳೆದು, ತಮ್ಮ ಕುಟುಂಬಕ್ಕೆ ರುಚಿ, ಶುಚಿಯಾದ, ತರಕಾರಿಯನ್ನು ನೀಡಬಹುದು. 20 x 20 ಅಡಿಯಲ್ಲಿ ಈ ಕೃಷಿಯಿಂದ ಒಂದು ಕುಟುಂಬಕ್ಕೆ ಬೇಕಾದ ತರಕಾರಿ, ಸೊಪ್ಪುಗಳನ್ನು ಬೆಳೆದುಕೊಳ್ಳಬಹುದು. ಮೊದಲಿಗೆ 10,000 ವೆಚ್ಚದಲ್ಲಿ ಹೈಡ್ರೋ ಫೀನಿಕ್ಸ್ ಕೃಷಿಯನ್ನು ಆರಂಭಿಸಿದರೇ ವರ್ಷ ಪೂರ್ತಿ ದಿನಕ್ಕೆ 2 ರಿಂದ 2½ ಕೆ.ಜಿ. ತರಕಾರಿ ಪಡೆಯಬಹುದಲ್ಲದೆ

ಆಸಕ್ತರು ಈ ಕೆಳಕಂಡ ವಿಳಾಸದಲ್ಲಿ ಹೆಚ್ಚಿನ ವಿವರಕ್ಕಾಗಿ ಸಂಪರ್ಕಿಸಬಹುದಾಗಿದೆ.

ಸಿ.ವಿ. ಪ್ರಕಾಶ
ಫೆಟ್‌ಬಹೋರ ಮಣ್ಣು ರಹಿತ ಕೃಷಿ
ದೂರವಾಣಿ : 09895522777
ಸಂಗೀತ ಬೋಜಪ್ಪ : 9480614645